## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 23.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಪಿ ಜೆ ಎ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ. ನನ್ನ ವಯಸ್ಸನ್ನು ತೋರಿಸಲು ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಆಧಾರ ಕಾರ್ಡ ಹಾಜರಪಡಿಸಿದ್ದೇನೆ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಯಾವುದೇ ಆಧಾರ ಕಾರ್ಡ ಹಾಗೂ ನನ್ನ 10 ನೇ ತರಗತಿಯವರ ಅಂಕಪಟ್ಟಿಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಾನು ಹುಬ್ಬಳ್ಳಿಯಲ್ಲಿ ಮನೆ ಮಾಡಿದ್ದೇನೆ ಎಂದು ಹೇಳುವುದು ಸುಳ್ಳು ಇದೆ ಆ ಕಾರಣಕ್ಕೆ ನಾನು ಅಂಕಪಟ್ಟಿ ಹಾಗೂ ಆಧಾರ ಕಾರ್ಡನ್ನು ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ನಾನು ಹುಬ್ಬಳ್ಳಿಯಲ್ಲಿಯೇ ವಾಸವಿರುತ್ತೇನೆ ಆದರೆ ದಾಖಲೆ ಹಾಜರಪಡಿಸಿಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಶಹಾಪುರ ಎಂದು ಹೇಳಿದ್ದು ಆದರೆ ಹುಬ್ಬಳ್ಳಿ ಎಂಬುದಕ್ಕೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ಸದರಿ ಅಪಘಾತ ಕೂಡ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಆಗಿರುವುದಿಲ್ಲ ಆ ಕಾರಣಕ್ಕೆ ಈ ನ್ಯಾಯಾಲಯದ ವ್ಯಾಪ್ತಿಗೆ ಅರ್ಜಿ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಶಹಾಪುರದಲ್ಲಿಯಾದರೂ ನನ್ನ ವಿಳಾಸ ಎಲ್ಲಿದೆ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನನ್ನ ವಯಸ್ಸು 43 ವರ್ಷ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ದಿಃ

11/12/2022 ರಂದು ನಾನು ಶಹಾಪುರನಿಂದ ಹುಬ್ಬಳ್ಳಿಗೆ ಹೊರಟಿದ್ದೇನು. ಕೆಎ-33/ಎಂ-4457 ಮಾರುತಿ ಒಮ್ನಿ ಕಾರ್ ಇದು ನನ್ನ ಅಣ್ಣನಾದ ರಮೇಶ ಶೀಲಪ್ಪ ಕಡಗೋಡ ರವರದ್ದು. ಸದರಿ ವಾಹನ ನನ್ನ ಮಾಲೀಕತ್ವದ್ದಲ್ಲ ಎಂದರೆ ಸರಿ. ಸದರಿ ವಾಹನದ ಚಾಲನಾ ಪರವಾನಿಗೆ ಮತ್ತು ವಿಮೆ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರಪಡಿಸಿದ್ದೇನೆ ಎನ್ನುತ್ತಾರೆ. ನಾನು ಹಾಜರಪಡಿಸಿರುವ ದಾಖಲೆ ಖೊಟ್ಟಿ ಇದೆ ಅದು ರಮೇಶ ಶೀಲಪ್ಪ ಕಡಗೋಡರವರಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೋವನ್ನು ತೋರಿಸಿ ಸಾಕ್ಷಿ ಸದರಿ ವಾಹನದಲ್ಲಿ ಫಾಗ್ ಲ್ಯಾಂಪ್ ಹಾಕಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿಃ11/12/2022 ರಂದು ಬೆಳಿಗ್ಗೆ ಮಳೆ ಇತ್ತು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ದಿನ ಮಳೆ ಇತ್ತು ನಾನು ಜೋರಾಗಿ ನನ್ನ ವಾಹನವನ್ನು ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆ ದಿನ ಫಾಗ್ ಲ್ಯಾಂಪ್ ನಿಂದ ಹಿಡಿದು ಎಲ್ಲ ಲೈಟ್‌ಗಳನ್ನು ಆನ್ ಮಾಡಿಕೊಂಡು ಜೋರಾಗಿ ಬರುತ್ತಿದ್ದೆ ಎಂದರೆ ಸರಿಯಲ್ಲ. ದೊರೆಸ್ವಾಮಿಮಠ ಬೈರನಳ್ಳಿ ಗ್ರಾಮದ ಅಪಘಾತವಾದ ಸ್ಥಳದಲ್ಲಿ ಹಂಪ್ಸ ಇತ್ತು ಎಂದರೆ ಸರಿ. ನಿಪಿ.4 ರಲ್ಲಿ ಸದರಿ ಬಸ್ ಹುಬ್ಬಳ್ಳಿಯಿಂದ ಬಾಗಲಕೋಟೆಗೆ ಹೋಗುತ್ತಿತ್ತು ಎಂದರೆ ಸಾಕ್ಷಿ ಅದು ಬಾಗಲಕೋಟೆಯಿಂದ ರಸ್ತೆಯ ಬಲಭಾಗದಲ್ಲಿ ಬರುತ್ತಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಆ ದಿನ ನಾನು ಫಾಗ್ ಲ್ಯಾಂಪ್ ಹಾಕಿಕೊಂಡು ಒಂದು ಕ್ರೂಸರ್ ವಾಹನವನ್ನು ಓವರ್ ಟೆಕ್ ಮಾಡಿಕೊಂಡು ಬಂದೆ ಎಂದರೆ ಸರಿಯಲ್ಲ. ನಾನು ಆ ದಿನ ಜೋರಾಗಿ ವಾಹವನ್ನು ಚಾಲನೆ ಮಾಡಿಕೊಂಡು ಬಂದು ಬಸ್ಸಿನ ಬಲಭಾಗಕ್ಕೆ ಡಿಕ್ಕಿ ಹೊಡೆದಿರುತ್ತೇನೆ ಎಂದರೆ ಸಾಕ್ಷಿ ಅವರೇ ನನ್ನ ವಾಹನದ ಬಲಭಾಗಕ್ಕೆ ಡಿಕ್ಕಿ ಹೊಡೆದಿರುತ್ತಾರೆ ಎನ್ನುತ್ತಾರೆ. ಆ ದಿನ ನಾನೇ ನನ್ನ ತಪ್ಪಿನಿಂದ ಬಸ್ಸಿಗೆ ಡಿಕ್ಕಿ ಹೊಡೆದಿರುತ್ತೇನೆ ಆದರೂ ಬಸ್ಸು

ಹೊಡೆದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ರಾಜಕೀಯ ಪ್ರಭಾವ ಬಳಸಿ ಬಸ್ ಚಾಲಕನ ಮೇಲೆ ಒಂದು ಸುಳ್ಳು ಫಿರ್ಯಾದು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ಕೆ ಎಸ್ ಶರ್ಮಾ ಇವರ ಕೆಲಸಕ್ಕೆ ನಾನು ಬರುತ್ತಿದ್ದೆ ಎಂದು ಹೇಳಿದ್ದು ಸದರಿಯವರು ರಾಜಕೀಯ ಧುರಿಣರು ಎಂದರೆ ಸರಿ. ಸದರಿಯವರ ರಾಜಕೀಯ ಪ್ರಭಾವ ಬೀರಿ ನಮ್ಮ ಬಸ್ ಚಾಲಕನ ಮೇಲೆ ಒಂದು ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಅಪಘಾತದ ಬಗ್ಗೆ ಹೇಳಿಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನಗೆ ಪ್ರಜ್ಞೆ ಇಲ್ಲದ ಕಾರಣ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ತಪ್ಪು ಗೊತ್ತಾಗುತ್ತದೆ ಎಂಬ ಕಾರಣಕ್ಕೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿಃ 11/12/2022 ರಂದು ನರಗುಂದ ಸರ್ಕಾರಿ ದವಾಖಾನೆಗೆ ಹೋಗಿದ್ದೇನೆ ಎಂದು ಹೇಳಿದ್ದು ಅಲ್ಲಿ ಎಂ ಎಲ್ ಸಿ ಮಾಡಿಸಿದ್ದೀರಾ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.8 ರಲ್ಲಿ ಬಸ್ ಆಗಲೀ ಒಮ್ನಿ ಕಾರ್ ಆಗಲೀ ನಮೂದು ಮಾಡಿಲ್ಲ ಎಂದರೆ ಸರಿ. ನಾವುಗಳೆಲ್ಲರೂ ತೀರ್ಮಾನಿಸಿ ದಿನಾಂಕ 11/12/2022 ರಂದು ದುರುದ್ದೇಶದಿಂದ ಬಸ್ ಚಾಲಕನ ಮೇಲೆ ಫಿರ್ಯಾದು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ಆಗಿರುವಂತಹ ಜಖಂಗಳು ನಾನೇ ನನ್ನ ವಾಹನವನ್ನು ಡಿಕ್ಕಿ ಹೊಡೆಪಡಿಸಿದರೆ ಆಗುವಂತಹ ಜಖಂಗಳೆಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ನಾನು ಆ ದಿನ ರಸ್ತೆಯ ಎಡಬದಿಗೆ ಬರುತ್ತಿದ್ದೆ ಬಸ್ ನವನು ಬಲಗಡೆ ಬಂದು ಡಿಕ್ಕಿ ಹೊಡೆದ ಎಂದು ಹೇಳಿರುವುದು ಸೃಷ್ಟಿಸಿದ ಕಥೆ ಎಂದರೆ ಸರಿಯಲ್ಲ. ಕೆಎ-29/ಎಫ್-1423 ವಾಹನದ ಚಾಲಕನ ಯಾವುದೇ ತಪ್ಪು ಇರುವುದಿಲ್ಲ ಆ ಕಾರಣಕ್ಕೆ ಅವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ನಾನು ಮೋರಾರ್ಜಿ ದೇಸಾಯಿ ಶಾಲೆಯಲ್ಲಿ ಸೆಕ್ಯೂರಿಟಿ ಗಾರ್ಡ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಅರ್ಜಿಯಲ್ಲಿ ಈ ವಿಚಾರವನ್ನು ಬರೆಸಿಲ್ಲ ಎಂದರೆ ಸಾಕ್ಷಿ ನಾನು ಹೇಳಿದ್ದೆ ಅವರು ಬರೆದಿಲ್ಲ ಎನ್ನುತ್ತಾರೆ. ಈಗಲೂ ಕೂಡ ಅಲ್ಲಿಯೇ ಸೇವೆ ಮಾಡುತ್ತಿದ್ದೇನೆ ಎಂದು ನನ್ನ ಪ್ರಮಾಣಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿ. ನಿಪಿ.8 ರಲ್ಲಿ ನನಗೆ ಎಲ್ಲಿಯೂ ಕೂಡ ಮೂಳೆ ಮುರಿತ ಆಗಿರುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಈ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಾನು ಈಗಲೂ ಕೂಡ ಸಾಮಾನ್ಯ ಮನುಷ್ಯನಂತೆ ಇರುತ್ತೇನೆ ನನಗೆ ಯಾವುದೇ ರೀತಿಯ ಮೂಳೆ ಮುರಿತ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮದು ಬಿ ಪಿ ಎಲ್ ರೇಶನ್ ಕಾರ್ಡ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಅಲ್ಲಿ ನಾನು ನನ್ನ ಆದಾಯ 10 ಸಾವಿರ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 25 ಸಾವಿರ ರೂ. ಆದಾಯ ಇದೆ ಎಂದು ತೋರಿಸಿರುವುದು ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಫೈಲ್ ಮಾಡುತ್ತಿದ್ದೆ ಎಂದು ಬರೆಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆ ಹಾಜರಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನನಗೆ ಯಾವುದೇ ಅಂಗನ್ಯೂನ್ಯತೆಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ.13 ರಲ್ಲಿ ಶಂಕ್ರಪ್ಪ ಶಹಾಪುರ ಎಂಬ ಹೆಸರಿದೆ ನನ್ನ ಹೆಸರು ಇಲ್ಲ ಎಂದರೆ ಸಾಕ್ಷಿ ಅದು ನನ್ನ ಹೆಸರು ಎನ್ನುತ್ತಾರೆ. ನಿಪಿ.16 ರಲ್ಲಿ ಶಂಕರ ಎಂಬುದು ಬರೆದಿದೆಯಾ ಎಂದರೆ ಸಾಕ್ಷಿ Sh ಎಂಬುದಾಗಿ ಶಾರ್ಟ ಆಗಿ ಬರೆದಿರುತ್ತಾರೆ ಎನ್ನುತ್ತಾರೆ. Orthopedic care center ನ ದಾಖಲೆಗಳು ಎಲ್ಲವೂ ಖೊಟ್ಟಿಯಾಗಿವೆ ಎಂದರೆ ಸಾಕ್ಷಿ ತೋರಿಸಿದ್ದು ಖರೆ ಇದೆ ಎನ್ನುತ್ತಾರೆ. ನಿಪಿ.25 ರಲ್ಲಿ ಗಾಡಿ ಸಂಖ್ಯೆ ನಮೂದು ಇಲ್ಲ ಎಂದರೆ ಸರಿ. ನಿಪಿ.23 ರಲ್ಲಿಯೂ ಕೂಡ ಯಾವ ದಿನಾಂಕ ಯಾವ

ವಾಹನ ಎಂಬುದು ನಮೂದು ಇಲ್ಲ ಎಂದರೆ ಸರಿ. ನಿಪಿ.24 ಕೂಡ ಘಟನೆಯಾದ ಸಂಬಂಧದ್ದು ಅಲ್ಲ ಅದನ್ನು 2023ರಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಯಾವುದೇ ಮಾರುತಿ ಕಾರ್ ಒಮ್ನಿ ಮಾಲೀಕನಲ್ಲ ಆ ಕಾರಣಕ್ಕೆ ಯಾವುದೇ ಪರಿಹಾರ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನರಗುಂದ ಆಸ್ಪತ್ರೆಯಿಂದ ಕಿಮ್ಸ ಆಸ್ಪತ್ರೆಗೆ ಬಂದೆ ಎಂದು ಹೇಳುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಒಂದು ತಿಂಗಳು ಒಳರೋಗಿಯಾಗಿದ್ದು ನನಗೆ ಸಾಕಷ್ಟು ಮೂಳೆ ಮುರಿತಗಳು ಆಗಿವೆ ಎಂದು ಹೇಳಿದ್ದು ಈ ಸಂಬಂಧ ಯಾವುದೇ ದಾಖಲೆ ಹಾಜರಪಡಿಸಿಲ್ಲ ಆ ಕಾರಣಕ್ಕೆ ಅದು ಸುಳ್ಳು ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನಾನು ಆರಾಮವಾಗಿದ್ದೇನೆ ಎಂದು ಡಿಸ್ಚಾರ್ಜ ಮಾಡಿದ್ದಾರೆ ಎಂದರೆ ಸರಿ. ನಾನು 3 ಲಕ್ಷ 50 ಸಾವಿರ ರೂ.ಗಳನ್ನು ವೈದ್ಯಕೀಯ ವೆಚ್ಚಕ್ಕಾಗಿ ಹಾಗೂ ಒಂದೂವರೆ ಲಕ್ಷ ರೂ.ಗಳನ್ನು ವಾಹನಕ್ಕಾಗಿ ಖರ್ಚು ಮಾಡಿದ್ದೇನೆ ಎಂದು ಹೇಳುವುದೆಲ್ಲ ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ 4ನೇ ಖಂಡಿಕೆಯಲ್ಲಿ ಬರೆಸಿರುವ ವಿಚಾರಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಬಸ್ ಚಾಲಕನ ಯಾವುದೇ ತಪ್ಪು ಇಲ್ಲ ನನ್ನ ತಪ್ಪು ಇದೆ ಆದ ಕಾರಣ ಸದರಿ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**